ಶ್ರೀ ಕಡಿದಾಳ್ ಮಂಜಪ್ಪ.—ಇದರಿಂದ ಹೆಚ್ಚು ಪ್ರಯೋಜನವಿಲ್ಲವೆಂದು ನಮ್ಮ ಇಲಾಖೆಯ ಅಧಿಕಾರಿಗಳು ವರದಿಮಾಡಿದ್ದಾರೆ.

ಶ್ರೀ ಮುದ್ದುರಾಮಯ್ಯ.—ಮತ್ತೊಂದು ಸಾರಿ ಪರಿಶೀಲನೆಮಾಡಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುವಂತೆ ಹೇಳುತ್ತೇನೆ.

———

Brahmasandra Tank.

Q.—322. Sri MUDDURAMIAH (Koratagere-Madhugiri).—

Will the Government be pleased to state :—

(*a*) the number of years passed since the estimate of Brahmasandra Tank in Sira Taluk was prepared ;

(*b*) the steps taken to construct the said tank ?

A.—Sri KADIDAL MANJAPPA (Minister for Revenue and Public Works).—

(*a*) There is no proposal for the construction of new tank but an estimate for opening out a feeder channel to Brahmasandra Ooramundinakere was prepared during the year 1952 for Rs. 5,800.

(*b*) Does not arise.

ಶ್ರೀ ಮುದ್ದುರಾಮಯ್ಯ.—ಈ ಕಾಮಗಾರಿಯ ಅಂದಾಜು ಮೊಬಲಗು ಬಹಳ ಕಮ್ಮಿ ಇರುವುದರಿಂದ, ಇದನ್ನು ಬೇಗ ಮಾಡಿಸಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತೇವೆ.

———

Places in Mysore Taluk visited by the Present Ministers.

1 P.M.

Q.—330. Sri SHIVANANJE GOWDA (Mysore Taluk).—

Will the Government be pleased to state :—

(*a*) the names of places in Mysore Taluk visited by the present Ministers and the number of times they have visited them ;

(*b*) if they have not paid any visit, the reasons for not doing so ?

A.—Sri KADIDAL MANJAPPA (Minister for Revenue and Public Works).—

(*a*) Names of villages in Mysore Taluk visited by the Ministers.—

Date of visit and Names af villages visited	
14th Nov. 1952	
Harohalli (Jayapur Hobli).	The Minister for Local Self-Govt. (for opening the Adikarnataka School).
18th Nov. 1952	
Kumbarakoppal, Manchegowdanakoppal (Hamlets of Hebbal Kasaba Hobli).	The Minister for Revenue & Public Works (Inspection of villages).
19th Nov. 1952	
Marase Village (Varuna Hobli).	The Minister for Revenue & Public Works (Inspection of the Road to Makanahundi)..

(*b*) Does not arise.

ಶ್ರೀ ಶಿವನಂಜೇ ಗೌಡ.—ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು ಜಯಪುರ ಹೋಬಳಿ ಹಾರೋಹಳ್ಳಿಯಲ್ಲಿ ಒಂದು ಆದಿಕರ್ನಾಟಕರ ಪಾಠಶಾಲೆಯ ಪ್ರಾರಂಭೋತ್ಸವವನ್ನು ನೆರವೇರಿಸಲು ಹೋಗಿದ್ದ ಪಾಠ ಶಾಲೆಯನ್ನು ತೆರೆಯಲಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು ಆ ಪಾಠಶಾಲೆಯ ಪ್ರಾರಂಭೋತ್ಸವಕ್ಕೆ ಹೋಗಿದ್ದರು. ರೆವೆನ್ಯೂ ಮಂತ್ರಿಗಳು ಗ್ರಾಮಗಳ ಪರಿಶೀಲನೆಗಾಗಿ ಕುಂಬಾರ ಕೊಪ್ಪಲು ಮತ್ತು ಮಂಚೇಗೌಡನಕೊಪ್ಪಲು ಈ ಗ್ರಾಮಗಳಿಗೂ ಮತ್ತು ಮರಸೆ ಗ್ರಾಮಕ್ಕೆ ಮಾಕನಹುಂಡಿಗೆ ಹೋಗತಕ್ಕ ರಸ್ತೆಯನ್ನು ಪರಿಶೀಲನೆ ಮಾಡಲು ಹೋಗಿದ್ದರು.

ಶ್ರೀ ಶಿವನಂಜೇ ಗೌಡ.—ಆಗ ತಮಗೆ ಆ ಸುತ್ತ ಮುತ್ತಿನ ಜನರು ಅವರ ಅನಿವಾರ್ಯಗಳ ಬಗ್ಗೆ ಸಲ್ಲಿಸಲಾಗಿದ್ದ ಮನವಿಗಳ ಮತ್ತು ಕೇಳಿಕೆಗಳ ಬಗ್ಗೆ ತಮಗೆ ಇಲಾಖೆಯವರಿಂದ ವರದಿಗಳು ಬಂದಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದ ವರದಿಗಳನ್ನೂ ಬಂದಿಲ್ಲ.

ಶ್ರೀ ಶಿವನಂಜೇ ಗೌಡ.—ಅಲ್ಲಿಯ ಜನರು ತಾವು ಅಲ್ಲಿಗೆ ಸ್ಥಳ ಅಜಮಾಯಿಷಿ ಬಗ್ಗೆ ದಯಮಾಡಿಸಿದ್ದಾಗ್ಗೆ ಆ ಕೆಲಸಗಳನ್ನು ಬೇಗ ಮಾಡಿಸಿಕೊಡಬೇಕೆಂದು ಅರಿಕೆ ಮಾಡಿಕೊಂಡಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆಲಸಗಳೆಲ್ಲಾ ರೂರಲ್ ಡೆವಲಪ್‌ಮೆಂಟ್ ಬಾಬಿನಿಂದ ಆಗಬೇಕಾಗಿವೆ.